KATK010046322018

**ಒಂದನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು**

**ಸ್ಪೆಷಲ್ ಕೇಸ್ ನಂ. 384/2018**

| | | |
|---|---|---|
| ಹೆಸರು | ಮೋಹನ್ | ಫ್ರಾಸಾ- 5 |
| ತಂದೆಯ ಹೆಸರು | ಶಂಕರಪ್ಪ | ಚಾಸಾ- 2 |
| ವಯಸ್ಸು | 51 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸಸ್ಥಳ | ತಡಸೂರು | |

ದಿನಾಂಕಃ **27-05-2022** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರವರಿಂದಃ-**

ಚಾಸಾ-3 ನನಗೆ ಗೊತ್ತು. ಪೊಲೀಸರು ಆರೋಪಿ 1 ಸತೀಶ ಇವರ ಜಮೀನಿನ ಬಳಿ ಬಂದ ಬಗ್ಗೆ ಮತ್ತು ಅಲ್ಲಿ ಪಂಚನಾಮೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಊರಿನಲ್ಲಿದ್ದ ಸಮಯದಲ್ಲಿ ನನ್ನಿಂದ ಒಂದು ಸಹಿ ತೆಗೆದುಕೊಂಡರು. ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಎಇಇ ರವರು ತನಿಖಾ ವರದಿಯನ್ನೂ ಸಹ ತಯಾರಿಸಿದರು. ಅದಕ್ಕೂ ಸಹ ನಾನು ಸಹಿ ಮಾಡಿದ್ದೇನೆ ಎಂದರೆ ನಾನು ಊರಿನಲ್ಲಿ ಸಹಿ ಮಾಡಿದ್ದೇನೆ. ತನಿಖಾ ವರದಿಯನ್ನು ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-

2(ಬಿ) ಎಂದು ಗುರುತಿಸಲಾಯಿತು. ನಾನುಇದರ ಬಗ್ಗೆ ಹೇಳಿಕೆಯನ್ನೂ ಸಹ ನೀಡಿದ್ದೇನೆ ಎಂದರೆ ಸರಿಯಲ್ಲ.

(ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲು ಮಾಡಲು ಅವಕಾಶ ನೀಡಬೇಕೆಂದು ಮಾನ್ಯ ಅಭಿಯೋಜಕರು ವಿನಂತಿಸಿಕೊಂಡಿದ್ದು ಅನುಮತಿ ನೀಡಲಾಯಿತು)

<u>ಪಾಟೀಸವಾಲು: ಸರ್ಕಾರಿ ಅಭಿಯೋಜಕರವರಿಂದಃ</u>

ಆರೋಪಿ 1 ನನಗೆ ಗೊತ್ತು. ಆತನು ಪಕ್ಕದ ಊರಿನವನು. ಆರೋಪಿ 1 ರವರು ತನ್ನ ಜಮೀನಿನಲ್ಲಿರುವ ಕೊಳವೆ ಬಾವಿಗೆ ಅಕ್ರಮವಾಗಿ ವಿದ್ಯುತ್ ಸಂಪರ್ಕ ತೆಗೆದುಕೊಂಡು ವಾಣಿಜ್ಯ ಉದ್ದೇಶಕ್ಕಾಗಿ ಟ್ಯಾಂಕರ್ ನಲ್ಲಿ ನೀರನ್ನು ತೆಗೆದುಕೂಂಡು ಮಾರಾಟ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಪಂಚನಾಮೆ ಮಾಡಿದ ಸಮಯದಲ್ಲಿ ನಾನು ಸ್ಥಳದಲ್ಲಿ ಹಾಜರಿದ್ದು ಸಹಿ ಮಾಡಿ ಈಗ ಊರಿನಲ್ಲಿ ಸಹಿ ಮಾಡಿದ್ದೇನೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ತನಿಖಾ ವರದಿಗೂ ಸಹ ನಾನು ಸಹಿ ಮಾಡಿ ಈಗ ಊರಿನಲ್ಲಿ ಸಹಿ ಮಾಡಿದ್ದೇನೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಇದರ ಬಗ್ಗೆ ಹೇಳಿಕೆಯನ್ನೂ ಸಹ ನೀಡಿ ಈಗ ಹೇಳಿಕೆಯನ್ನು ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-11 ಎಂದು ಗುರುತಿಸಲಾಯಿತು. ಆರೋಪಿ 1 ರವರು ನನ್ನ ಸ್ನೇಹಿತ ಎಂಬ ಕಾರಣಕ್ಕಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ ಇರುವುದಿಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು